ಪಡೆದುಕೊಳ್ಳುತ್ತದೆ. ಸೆಮ್‌ನ ನಿಜವಾದ ತಂದೆಯು ಮಗನನ್ನು ಬಿಟ್ಟು ದೂರಹೋಗುತ್ತಾನೆ. ತನ್ನ ಸ್ಪಿರಿಚುಯಲ್ ತಂದೆ ಮೆಹಮುತ್‌ನನ್ನು ತಾನು ಕೊಂದೆನೆಂಬ ನಿಷ್ಕಾರಣವಾದ ಅಪರಾಧೀಭಾವದಿಂದ ಸೆಮ್ ದಶಕಗಳ ಕಾಲ ನರಳುತ್ತಾನೆ. ತಾನು ಕೂಡಿ ಮಗನನ್ನು ಪಡೆದಿದ್ದ ಕೆಂಪುಮುಡಿಯ ಹೆಣ್ಣಿನೊಡನೆ ತನ್ನ ನಿಜವಾದ ತಂದೆ ಮತ್ತು ಸ್ಪಿರಿಚುಯಲ್ ತಂದೆ ಇಬ್ಬರೂ ಸಂಬಂಧ ಹೊಂದಿರಬಹುದೆಂಬ ಅರಿವು ಅವನನ್ನು ದಿಗ್ಭ್ರಾಂತನಾಗಿಸುತ್ತದೆ. ಅದಕ್ಕಿಂತ ಮುಖ್ಯವಾಗಿ ತಾನು ಪ್ರೀತಿಸುವ ಮಗ ತನ್ನನ್ನು ದ್ವೇಷಿಸುವ ದುರಂತವು ಅವನನ್ನು ನಾಶಮಾಡುತ್ತದೆ. ಇದೆಲ್ಲವೂ ಯಾವುದೋ ದೇಶಕಾಲಗಳಲ್ಲಿ ನಡೆದ ಕತೆಯಾಗದೆ, ನಮ್ಮೊಳಗೇ ನಡೆಯುವ ಕತೆಯಾಗುತ್ತ ಮನುಷ್ಯ ಸಂಬಂಧಗಳಿಗೆ ಹಿಡಿದ ಕನ್ನಡಿಯಾಗುತ್ತವೆ.

ಕಾದಂಬರಿಯ ಕಡೆಯಲ್ಲಿ ತಂದೆಯ ಕೊಲೆ ಆರೋಪದ ಮೇಲೆ ಸೆಮ್‌ನ ಮಗ ಜೈಲಿನಲ್ಲಿದ್ದಾನೆ. ಲೇಖಕನಾಗಬೇಕೆಂಬ ಸೆಮ್‌ನ ಅಪೂರ್ಣ ಆಸೆಯು ಅವನ ಮಗನಲ್ಲಿ ಹಂಬಲವಾಗಿ ಬೆಳೆದು, ಅವನು ತನ್ನ ಬದುಕಿನ ಅನುಭವಗಳನ್ನೆಲ್ಲ ಹೇಳುತ್ತ ತಂದೆಯ ಬಗ್ಗೆ ಅರಿಯಲು ತೊಡಗುವುದು ಬರೆಯುವ ಮೂಲಕವೇ. ಅವನ ಬರಹವು, 'ನಾನು ಬರಹಗಾರನಾಬೇಕೆಂದುಕೊಂಡಿದ್ದೆ' ಎಂದು ಮೊದಲಾಗುತ್ತದೆ. ಅದನ್ನು ಓದಿದಾಗ, ಕಾದಂಬರಿಯ ಮೊದಲನೆಯ ಸಾಲು 'ನಾನು ಬರಹಗಾರನಾಬೇಕೆಂದುಕೊಂಡಿದ್ದೆ' ಎಂದು ಸೆಮ್ ಹೇಳುವ ಮಾತಿಗೆ ಮರುಜೀವ ಬಂದ ಹಾಗನ್ನಿಸುತ್ತದೆ. ತಂದೆ ಮಕ್ಕಳ ಆಸೆಯು ಬರಹದ ಮೂಲಕ ನಡೆಸುವ ಶೋಧನೆಯೇ ಆಗಿದೆ. ತನ್ನನ್ನೇ ನೋಡಿಕೊಂಡು ಬರೆಯಲು ತೊಡಗುವ ಮಗನನ್ನು ನೋಡಿ ಸಂಭ್ರಮಿಸುತ್ತ ಅವನ ತಾಯಿ–ಕೆಂಪುಮುಡಿಯ ಹೆಣ್ಣು ಅವನಿಗೆ ಒಂದು ಚಿತ್ರವನ್ನು ಕೊಡುತ್ತಾಳೆ. ಅದು ಜಗತ್ಪ್ರಸಿದ್ಧ ಕಲಾವಿದ ಡಾಂಟೆ ಗೇಬ್ರಿಯಲ್ ರೊಸೆಟ್ಟಿ ಬರೆದ 'ಕೆಂಪುಮುಡಿಯ ಹೆಣ್ಣು' ಶೀರ್ಷಿಕೆಯ ಚಿತ್ರ. ಡಾಂಟೆಯು ರಚಿಸಿದ 'ಕೆಂಪುಮುಡಿಯ ಹೆಣ್ಣು' ಚಿತ್ರಗಳ ಸರಣಿಯೇ ಇದೆ. ಈ ಚಿತ್ರದಿಂದಲೇ ಕಾದಂಬರಿಕಾರ ಸ್ಫೂರ್ತಿ ಪಡೆದಿರಬಹುದೇ ಎಂದು ನಮಗೆ ಅನ್ನಿಸುವಾಗಲೇ ಅವಳು ಮಗನಿಗೆ, 'ನಿನ್ನ ಕಾದಂಬರಿಯ ಮುಖಪುಟಕ್ಕೆ ಇದನ್ನು ಬಳಸು... ತರುಣಿಯಾಗಿದ್ದಾಗಿನ ನಿನ್ನ ಸುಂದರ ತಾಯಿಯ ಬಗ್ಗೆ ಆ ಕಾದಂಬರಿಯಲ್ಲಿ ಒಂದಿಷ್ಟು ಜಾಗವಿರಬಹುದು... ಕಾದಂಬರಿ ಪ್ರಾಮಾಣಿಕವಾಗಿರಬೇಕು ಜೊತೆಗೆ ಪುರಾಣ ಸದೃಶವೂ ಆಗಿರಬೇಕು... ನಿಜಕಥೆಯಂತೆ ನಂಬುವಂತಿರಬೇಕು, ಪುರಾಣದ ಹಾಗೆ ಪರಿಚಿತವೂ ಇರಬೇಕು... ನೆನಪಿಟ್ಟುಕೋ, ನಿನ್ನಪ್ಪನೂ ಯಾವಾಗಲೂ ತಾನು ಲೇಖಕನಾಗಬೇಕೆಂದು ಹಂಬಲಿಸಿದ್ದ' ಎನ್ನುತ್ತಾಳೆ. ಇಲ್ಲಿಗೆ ಕಾದಂಬರಿ ಮುಗಿಯುತ್ತದೆ, ಆದರೆ ಅದು ನಮ್ಮ ಮನಸ್ಸಿನಲ್ಲಿ ಬೆಳೆಯತೊಡಗುತ್ತದೆ. ಇದೇ ತಾನೆ ದೊಡ್ಡ ಕೃತಿಗಳ ಸೋಜಿಗ?


## ತೇಜಶ್ರೀ

ಕವಯಿತ್ರಿ ಹಾಗೂ ಅನುವಾದಕಿ ತೇಜಶ್ರೀ ಹಾಸನದಲ್ಲಿ ನೆಲೆಸಿದ್ದಾರೆ. 'ಲಯ', 'ತಿಳಿಗೊಳ', 'ಉಸ್ರುಬಂಡೆ', 'ಮಾಗಿ ಕಾಲದ ಸಾಲುಗಳು', 'ಅವನರಿವಲ್ಲಿ' ಅವರ ಕವನ ಸಂಗ್ರಹಗಳಾಗಿವೆ. ಲೇಖಕ ಯು.ಆರ್. ಅನಂತಮೂರ್ತಿ ಅವರ ಆತ್ಮಕತೆ 'ಸುರಗಿ'ಯನ್ನು ನಿರೂಪಿಸಿ–ಸಂಯೋಜಿಸಿ ಸಂಪಾದಿಸಿದ್ದಾರೆ.